# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3055 (2483)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ವಿಷಯ : ಕೆರೆಗೆ ತಡೆಗೋಡೆ ಇಲ್ಲದಿರುವುದರಿಂದ ಅಪಾಯದ ಮಟ್ಟ ಮೀರಿರುವ ಕುರಿತು

(ಅ) ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿಗೆ ಸೇರಿದ ಮಾರಸಂದ್ರ ಗ್ರಾಮದಿಂದ ಹೊನ್ನಾದೇವಿಪುರ ಗೇಟ್‌ವರೆಗೆ ರಸ್ತೆ ಕಾಮಗಾರಿಯ ರೂಪುರೇಷೆಗಳೇನು; ಈ ಕಾಮಗಾರಿಯನ್ನು ಕೈಗೊಂಡಿದ್ದು ಯಾವಾಗ; ಇದು ಪೂರ್ಣಗೊಂಡಿದೆಯೇ; (ವಿವರ ನೀಡುವುದು)

(ಆ) ಈ ಕಾಮಗಾರಿ ಸೇರಿದಂತೆ ದೊಡ್ಡ ತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗೆ ಕೆರೆ ಏರಿ ಮೇಲೆ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸದೆ ಸ್ಥಗಿತಗೊಂಡಿರುವುದಲ್ಲದೆ ಈ ಕೆರೆಗೆ ತಡೆಗೋಡೆ ಇಲ್ಲದೆ ಇರುವುದರಿಂದ ಅಪಾಯದ ಮಟ್ಟ ಮೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸೂಕ್ತ ಕ್ರಮ ಕೈಗೊಳ್ಳುವುದು ಯಾವಾಗ;

(ಇ) ಈ ರಸ್ತೆಯು ಸಂಪೂರ್ಣ ಮಣ್ಣು ರಸ್ತೆಯಾಗಿದ್ದು, ಮಳೆಗಾಲದಲ್ಲಿ ಸಾರ್ವಜನಿಕರಿಗೆ/ಶಾಲಾ ವಾಹನಗಳಿಗೆ/ದನಕರುಗಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಸರ್ಕಾರವು ಕೂಡಲೇ ಆದ್ಯತೆ ಮೇಲೆ ಕೆಲಸ ಕೈಗೊಳ್ಳುವುದೇ ?(ಸಂಪೂರ್ಣ ವಿವರ ನೀಡುವುದು)